ಶ್ರೀ ವೈ. ಎಂ. ವೀರಣ್ಣ.—ಈಗ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರುಗಳ ಮನೆ ಬಾಡಿಗೆ, ಪ್ರವಾಸ ಭತ್ಯ ದೂರವಾಣಿ ಖರ್ಚು ಮತ್ತಿತರೆ ಎಲ್ಲಾ ಸೌಲಭ್ಯಗಳಿಗಾಗಿ ಖರ್ಚು ಮಾಡಿರುವ ಹಣವನ್ನು ನೋಡಿದಾಗ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರುಗಳ ಖರ್ಚು ವಿಪರೀತವಾಗಿದೆ ಎಂದು ಕಾಣುತ್ತಿದೆ. ಅವರ ಮನೆಯಲ್ಲಿ ಇರುವ ದೂರವಾಣಿಯ ಖರ್ಚು ೧ ಲಕ್ಷ ರೂಪಾಯಿಗಳವರೆಗೂ ಬಂದಿದೆ. ಆದ್ದರಿಂದ ಇದರ ಬಗ್ಗೆ ಏನಾದರೂ ಸರ್ಕಾರ ಮಿತಿಯನ್ನು ಹಾಕುವುದಕ್ಕೆ ಸಾಧ್ಯವೆ ? ಆ ರೀತಿಯ ಕ್ರಮವನ್ನು ತೆಗೆದುಕೊಂಡು, ಸರ್ಕಾರದ ಹಣವನ್ನು ಖರ್ಚು ಮಾಡುವುದರ ಮೇಲೆ ಹಿಡಿತವನ್ನು ಸಾಧಿಸುವುದಕ್ಕೆ ಸಹಾಯಕವಾಗುತ್ತದೆಂಬ ದೃಷ್ಟಿಯಿಂದ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಅವರ ಟಿ. ಎ.- ಡಿ. ಎ. ಸೇರಿ ಹೆಚ್ಚು ಕಡಿಮೆ ಒಂದು ಕೋಟಿ ರೂಪಾಯಿಗಳವರೆಗೆ ಬರುತ್ತಿದೆ. ಅಧ್ಯಕ್ಷರದ್ದು ಹಾಗೂ ಉಪಾಧ್ಯಕ್ಷರದ್ದು ಬ್ರೇಕಪ್ ಕೂಡ ಕೊಟ್ಟಿದ್ದೇನೆ.

ಶ್ರೀ ವೈ. ಎಂ. ವೀರಣ್ಣ.—ಇದಕ್ಕೆ ಕಾರಣ ಏನು ? ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಖರ್ಚಿನ ಬಗ್ಗೆ ಹಿಡಿತ ಇರಬೇಕು. ಇದನ್ನು ತಡೆಯುವ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬುದು ನನ್ನ ಪ್ರಶ್ನೆ. ಇಲ್ಲದಿದ್ದರೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳ ಖರ್ಚಿನಲ್ಲಿ ಬಹಳಷ್ಟು ವಿರುಪೇರುಗಳಾಗುತ್ತವೆ.

ಶ್ರೀ ಎಂ. ವೈ. ಘೋರ್ಪಡೆ.—ನಮ್ಮಲ್ಲೂ ಕೂಡ ಕೆಲವು ಮಂತ್ರಿಗಳು ಟಿ. ಎ., ಡಿ. ಎ. ಗಳನ್ನು ನೋಡಿದಾಗ ಬಹಳಷ್ಟು ವ್ಯತ್ಯಾಸಗಳು ಕಂಡು ಬರುತ್ತವೆ. ಅದೇ ರೀತಿಯಲ್ಲಿ ಇವರದರಲ್ಲೂ ವೇರಿಯೇಷನ್ ಇದೆ. ತಕ್ಷಣವೇ ಆ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ. ರೂಲ್ಸ್ ಪ್ರಕಾರ್ಸ್ ಇನ್ಸ್‌ಪೆಕ್ಷನ್ ಮಾಡುವಂತಹ ಅಧಿಕಾರ ಅವರಿಗೆ ಇದೆ. ಇನ್ಸ್‌ಪೆಕ್ಷನ್ ಅಧಿಕಾರದ ಪ್ರಕಾರ ಇನ್ಸ್‌ಪೆಕ್ಟ್ ಮಾಡಿ ಡಿ. ಎ., ಟಿ. ಎ. ಕ್ಲೈಮ್ ಮಾಡುತ್ತಾರೆ. ಅದರಂತೆ ಅವರಿಗೆ ಕೊಡಬೇಕಾಗುತ್ತದೆ.

ಶ್ರೀ ಮಂಜುನಾಥ್ ಕೊಣ್ಣೂರು.—ಧಾರವಾಡ ಜಿಲ್ಲಾ ಪರಿಷತ್ತಿನಲ್ಲಿ ವಹಿಕಲ್ ಮೈನೆಂಟನೆನ್ಸ್‌ಗೋಸ್ಕರವಾಗಿ ೧,೪೭,೯೬೬ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನುಳಿದ ೧೯ ಜಿಲ್ಲೆಗಳಲ್ಲಿರುವ ಜಿಲ್ಲಾ ಪರಿಷತ್ತಿನಲ್ಲಿ ಇಷ್ಟೊಂದು ಹಣ ಖರ್ಚಾಗಿಲ್ಲ. ಇದಕ್ಕೆ ಕಾರಣವೇನು ? ಧಾರವಾಡ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಒಂದು ಲಕ್ಷ ನಲವತ್ತೇಳು ಸಾವಿರ ರೂಪಾಯಿಯಷ್ಟು ಖರ್ಚು ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಬಹಳ ಲುಕ್ಸಾನ್ ಆಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಕ್ರಮ ಕೈಗೊಳ್ಳಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಒಟ್ಟಿನಲ್ಲಿ ೫೮ ಲಕ್ಷ ರೂಪಾಯಿಗಳಷ್ಟು ಈ ಅಧ್ಯಕ್ಷರುಗಳು ಖರ್ಚು ಮಾಡಿದ್ದಾರೆ.

ಶ್ರೀ ಆರ್. ಎನ್. ನಾಯಂಕ್.—ಐಟಂ ನಂ. ೮ ರಲ್ಲಿ ಮೈಟಿನೆನ್ಸ್ ಆಫ್ ವೆಹಿಕಲ್ಸ್‌ಗೆ ಬಹಳಷ್ಟು ದುಡ್ಡು ಖರ್ಚು ಮಾಡಿದ್ದಾರೆ. ಇಷ್ಟು ದುಡ್ಡು ಖರ್ಚು ಮಾಡುವುದರ ಬದಲು ಹೊಸ ವೆಹಿಕಲ್ಸ್ ಬರುತ್ತಿತ್ತು.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರಿಗೆ ಪ್ರತಿಯೊಂದರ ಬಗ್ಗೆ ವಿವರಗಳು ಬೇಕಾದರೆ ನಾನು ಒದಗಿಸಿಕೊಡುತ್ತೇನೆ.

ಶ್ರೀ ಕರಿಯಣ್ಣ.—ಪ್ರಶ್ನೆ ಅದಲ್ಲ, ಈ ತರಹ ಅನಾವಶ್ಯಕವಾಗಿ ಖರ್ಚು ಮಾಡಿದ್ದಾರೆ.

ಅಧ್ಯಕ್ಷರು.—ಮಾನ್ಯ ಬೈರೇಗೌಡರೇ ನಿಮ್ಮ ಪ್ರಶ್ನೆಗೆ ಸರ್ಕಾರದವರು ಟೈಮ್ ಕೇಳಿದ್ದಾರೆ.

ಶ್ರೀ ಸಿ. ಬೈರೇಗೌಡ —ಈ ಪ್ರಶ್ನೆ ತಪ್ಪಾಗಿ ಪ್ರಿಂಟ್ ಆಗಿದೆ. ನಾನು ಕೇಳಿರುವ ಕೆಲವು ಅಂಶಗಳನ್ನು ಬಿಟ್ಟು ಪ್ರಿಂಟ್ ಮಾಡಿದ್ದಾರೆ. ಇದಕ್ಕೆ ಉತ್ತರ ಕೊಡುವಾಗ ಮೂಲ ಪ್ರಶ್ನೆಗೆ ಉತ್ತರ ತರಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಭೂಮಿಯಂ ಒತ್ತುವರಿ.

೮೬೬. ಶ್ರೀಮತಿ ವೋಟಮ್ಮ, (ಮೂಡಿಗೆರೆ).—ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ಎಷ್ಟು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಲಾಗಿದೆ ? (ಒತ್ತುವರಿದಾರರ ಹೆಸರು, ವಿಳಾಸಗಳನ್ನು ಸಂಪೂರ್ಣವಾಗಿ ನೀಡುವುದು)

ಆ) ಆ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಒಟ್ಟು ಎಷ್ಟು ಭೂಮಿಯನ್ನು ಒತ್ತುವರಿ ಮಾಡಿರುವರು ? (ವಿವರ/ಹೆಸರು/ವಿಳಾಸ)

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಸಚಿವರು).—

ಅ) ೫೬೭.೬೪ ಎಕರೆ

ಆ) ೮೯೪.೫೩ ಎಕರೆ

ಶ್ರೀಮತಿ ಮೋಟಮ್ಮ.—ಮಾನ್ಯ ಸಚಿವರು ಇಡೀ ಚಿಕ್ಕಮಗಳೂರು ಜಿಲ್ಲೆಯಲ್ಲಿ ೫೬೭.೬೪ ಎಕರೆ ಒತ್ತುವರಿ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ಹಾಗೆಯೇ ಅವರುಗಳ ಪೈಕಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ೮೯೪.೫೩ ಎಕರೆಗಳಷ್ಟು ಒತ್ತುವರಿ ಮಾಡಿಕೊಂಡಿದ್ದಾರೆಂದು ತಿಳಿಸಿರುತ್ತಾರೆ. ಒಟ್ಟು ೬೫೨೪.೧೭ ಗಳಷ್ಟು ಜಮೀನು ಒತ್ತುವರಿಯಾಗಿದೆ. ಈ ರೀತಿ ಒತ್ತುವರಿಯಾಗಿರತಕ್ಕ ಅರಣ್ಯ ಭೂಮಿಯ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಇವತ್ತು ಒತ್ತುವರಿಯ ಹೆಸರಿನಲ್ಲಿ ಅರಣ್ಯ ಭೂಮಿ, ಮತ್ತು ಕಂದಾಯ ಭೂಮಿಯ ದರೋಡೆಯಾಗುತ್ತಿದೆ. ಇದನ್ನು ತಡೆಗಟ್ಟದಿದ್ದರೆ ಮುಂದೆ ಯಾರ್ಯಾರೂ ಸತ್ತರೆ ಅವರನ್ನು ಹೂಳುವುದಕ್ಕೂ ಕೂಡ ಅಲ್ಲಿ ಜಾಗ ಇರುವುದಿಲ್ಲ. ಆದ್ದರಿಂದ ಸರ್ಕಾರವು ಈ ಅರಣ್ಯ ಭೂಮಿಗಳ ಒತ್ತುವರಿ ಬಗ್ಗೆ ಕಟ್ಟುನಿಟ್ಟಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ೫೬೭.೬೪ ಎಕರೆ ಏನು ಒತ್ತುವರಿಯಾಗಿದೆ ಇದರ ವಿವರ ಹೇಳುವುದು ಒಳ್ಳೆಯದು. ಐದು ಎಕರೆ ಒಳಗೆ ಅತಿಕ್ರಮಣ ಮಾಡಿರುವವರು ೪೩೦ ಜನ, ಹಾಗೂ ಒತ್ತುವರಿ ಆಗಿರತಕ್ಕ ಭೂಮಿ ೪೨೦೦ ಎಕರೆಗಳು. ಐದು ಎಕರೆಯಿಂದ ಹತ್ತು ಎಕರೆ ಒಳಗೆ ಒತ್ತುವರಿ ಏನಾಗಿದೆ ಅದು ೫೩೧ ಎಕರೆಗಳಾಷ್ಟಾಗಿದೆ. ಇನ್ನು ಹತ್ತರಿಂದ ಇಪ್ಪತ್ತು ಎಕರೆಯೊಳಗೆ ಒತ್ತುವರಿಯಾಗಿರುವವರು ೪೭೪ ಎಕರೆಗಳಷ್ಟಿದೆ- ಇನ್ನು ಇಪ್ಪತ್ತರಿಂದ ಐವತ್ತು ಎಕರೆಗಳಷ್ಟಿರುವವರಿಗೆ ಒತ್ತುವರಿ ಪ್ರವೇಶ ಮಾಡಿರುವುದು ೨೧೫ ಎಕರೆಗಳಾಷ್ಟಾಗಿದೆ. ಶ್ರೀ ನಾರಾಯಣ ಗೌಡ, ಬೊಳಗೂಡು ಒಬ್ಬರೆ ೨೦೦ ಎಕರೆಗಳಷ್ಟು ಅತಿಕ್ರಮ ಪ್ರವೇಶ ಮಾಡಿ ಒತ್ತುವರಿ ಮಾಡಿಕೊಂಡಿದ್ದಾರೆ. ಇದೆಲ್ಲಾ ಕಾಡು ಜಮೀನು. ಬಹಳ ವರ್ಷಗಳಿಂದ ಈ ಒತ್ತುವರಿ ಎಲ್ಲರ ಸಹಕಾರ ಹಾಗೂ ಬೆಂಬಲ ಇದ್ದರಿಂದ ಒತ್ತುವರಿ ನಡೆದಿದೆ. ಅತಿಕ್ರಮಣವಾಗಿರತಕ್ಕ ಭೂಮಿ ಎನಿದೆ ಇದನ್ನು ಯಾವ ರೀತಿ ಸರಿಮಾಡಬೇಕೆಂಬುದರ ಬಗ್ಗೆ ಸರ್ಕಾರ ಒಂದು ತೀವ್ರತೆಯಿಂದ ನಿರ್ಧಾರ ತೆಗೆದುಕೊಂಡು ಅವರನ್ನು ಕಿತ್ತು ಹಾಕಲಿಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀಮತಿ ಮೋಟಮ್ಮ.—೧೦ ಎಕರೆ ಅಥವಾ ೨೦ ಎಕರೆ ಯಾರು ಒತ್ತುವರಿ ಮಾಡಿರುತ್ತಾರೆ, ಅವರೆಲ್ಲರು ಮೇಲುಪರ್ಗಕ್ಕೆ ಸೇರಿದವರಾಗಿದ್ದಾರೆ. ಅರಣ್ಯ ಇಲಾಖೆಯಲ್ಲಿ ವಾಚರ್, ಗಾರ್ಡ್, ರೆಂಜ್ ಫಾರೆಸ್ಟ್ ಆಫೀಸರ್ ಎಲ್ಲಾ ಇರುತ್ತಾರೆ. ಈ ರೀತಿ ಇದ್ದರೂ ಕೂಡ ಹೇಗೆ ಅತಿಕ್ರಮಣವಾಯಿತು. ಇವರೆಲ್ಲರು ರಕ್ಷಣೆ ಇದ್ದುದ್ದರಿಂದಲೇ ಈ ರೀತಿ ಒತ್ತುವರಿಯಾಗಿದೆ. ೨೦೦ ಎಕರೆಗಳಷ್ಟು ಭೂಮಿಯನ್ನು ಒಬ್ಬ ಬಂಜವಾಳಶಾಹಿ ಒತ್ತುವರಿ ಮಾಡಿದ್ದಾರೆ. ಇವರಿಗೆ ಅರಣ್ಯ ಇಲಾಖೆಯವರು ರಕ್ಷಣೆ ಕೊಟ್ಟಿರಬಹುದು ಅಥವಾ ಶಾಮೀಲಾಗಿರಬಹುದು. ಆದ್ದರಿಂದ ತಾವು ಇದರ ಬಗ್ಗೆ ಸಿರಿಯಸ್ ಆಗಿ ಒಂದು ಎನ್‌ಕ್ವೈರಿ ಮಾಡಿಸಬೇಕು. ಆ ಕಾಲದಲ್ಲಿ ಯಾವ ಅಧಿಕಾರಿ ಇದ್ದರು, ಇದಕ್ಕೆ ಯಾರ್ಯಾರು ಶಾಮೀಲಾಗಿದ್ದಾರೆ ಎಂಬುದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂಬುದೇ ನನ್ನ ಪ್ರಶ್ನೆ.

೪.೩೦ ಪಿ.ಎಂ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆ ಉತ್ತಮವಾದುದು. ಯಾರು ಯಾರು ಫಾರೆಸ್ಟ್ ಅಧಿಕಾರಿಗಳು ಇದಕ್ಕೆ ಕಾರಣರಾಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಸರ್ಕಾರಕ್ಕೆ ಅನಿವಾರ್ಯ. ಸರ್ಕಾರ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಯಿತು.